





ದಿನಾಂಕ: 01-11-2025 ರಂದು ಕನ್ನಡ ರಾಜ್ಯೋತ್ಸವದ ಅಂಗವಾಗಿ ತಾಯಿ ಕನ್ನಡಾಂಬೆ ಭುವನೇಶ್ವರಿ ದೇವಿಗೆ ಮಾನ್ಯ ಸಭಾಪತಿ ಬಸವರಾಜ ಎಸ್.ಹೊರಟ್ಟಿ, ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಉಪ ಮುಖ್ಯಮಂತ್ರಿಗಳು, ಸರ್ಕಾರದ ಮುಖ್ಯ ಕಾರ್ಯದರ್ಶಿ ಡಾ.ಶಾಲಿನಿ ರಜನೀಶ್ ರವರು ಪುಷ್ಪ ನಮನ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಚಿವರು, ಶಾಸಕರು ಹಾಗೂ ಅಧಿಕಾರಿ ವರ್ಗದವರು ಉಪಸ್ಥಿತರಿದ್ದರು.









ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಅಂಗವಾಗಿ ನವೆಂಬರ್ 1ರಿಂದ ನವೆಂಬರ್ 15 ರವರೆಗೆ ನಡೆಯುತ್ತಿರುವ "ಏಕ ಭಾರತ್ ಶ್ರೇಷ್ಠ ಭಾರತ" ಎಂಬ ಭಾರತ ಪರ್ವ ಆಚರಣೆಯಲ್ಲಿ ಭಾಗವಹಿಸಿದ ಮಾನ್ಯ ವಿಧಾನ ಪರಿಷತ್ತಿನ ಸಭಾಪತಿಯವರಾದ ಶ್ರೀ ಬಸವರಾಜ ಹೊರಟ್ಟಿ ರವರು ಭಾರತ ಸರ್ಕಾರದ ಸಹಯೋಗದೊಂದಿಗೆ ಗುಜರಾತ್ ಸರ್ಕಾರವು ಆಯೋಜಿಸಿರುವ ಭಾರತ ಪರ್ವ 2025ರ ಈ ಭವ್ಯ ಆಚರಣೆಯು ಭಾರತದ ಆತ್ಮದ ಆಚರಣೆಯಾಗಿರುತ್ತದೆ. ಪ್ರತಿಯೊಂದು ರಾಜ್ಯ ಮತ್ತು ಕೇಂದ್ರಾಡಳಿತದ ಪ್ರದೇಶದ ಬಣ್ಣಗಳು, ಸಂಪ್ರದಾಯಗಳು ಮತ್ತು ಭಾವನೆಗಳನ್ನು ಒಟ್ಟುಗೂಡಿಸುತ್ತದೆ. 1947ರಲ್ಲಿ ಆಗಿನ ಮೈಸೂರು ಮಹಾರಾಜರಾದ ಹಾಗೂ ಅಖಂಡ ಭಾರತದ ಕಲ್ಪನೆಯ ಬೆಂಬಲಿಗರಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ರವರು ರಾಜ್ಯ ಪ್ರಭುತ್ವದ ರಾಜ್ಯಗಳ ಏಕೀಕರಣಕ್ಕಾಗಿ ಭಾರತದ ಉಕ್ಕಿನ ಮನುಷ್ಯ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ತಮ್ಮ ವೈಯಕ್ತಿಕ ನೊಂದಣಿ ಹೊಂದಿರುವ ಡಿಸಿ-3 ಡಕೋಟಾ VT-AXX ವಿಮಾನವನ್ನು ಉಡುಗೊರೆಯಾಗಿ ನೀಡಿರುತ್ತಾರೆ. ಸದರಿ  ವಿಮಾನವು ಗಂಟೆಗೆ 333 ಕಿಲೋಮೀಟರ್ ವೇಗದಲ್ಲಿ ಪ್ರಯಾಣಿಸಬಹುದಾದ ಹಾಗೂ 2400 ಕಿಲೋಮೀಟರ್‌ಗಳ ವ್ಯಾಪ್ತಿ ಉಳ್ಳದಾಗಿದ್ದು ಹಾಗೂ ಕಿರಿದಾದ ಮತ್ತು ಮಣ್ಣು ತುಂಬಿದ ರನ್ ವೇ ಗಳ ಮೇಲೆ ಇಳಿಯುವ ಸಾಮರ್ಥ್ಯವಿದ್ದ ಕಾರಣದಿಂದಾಗಿ ಭಾರತದ ಸವಾಲಿನ ಭೌಗೋಳಿಕ ಪರಿಸ್ಥಿತಿಗೆ ಅತ್ಯಂತ ತಕ್ಕದಾಗಿತ್ತು.

ಸದರಿ ವಿಮಾನದ ಸಹಾಯದಿಂದ ರಾಜ್ಯ ಪ್ರಭುತ್ವವುಳ್ಳ ಸಂಸ್ಥಾನಗಳನ್ನು ಏಕೀಕರಿಸಿರುವುದಕ್ಕಾಗಿ ಭಾರತದ ಉಕ್ಕಿನ ಮನುಷ್ಯ ಎಂದು ಪ್ರಸಿದ್ಧಿ ಹೊಂದಿರುವ ಭಾರತದ ಮೊದಲ ಉಪ ಪ್ರಧಾನಿ ಶ್ರೀ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರಿಗೆ ಅನುಕೂಲವಾಗಿತೆಂದು ಈ ಸಂದರ್ಭದಲ್ಲಿ ಮಾನ್ಯರು ಉಲ್ಲೇಖಿಸುತ್ತಾ ಭಾರತದ ಏಕೀಕರಣಕ್ಕೆ ಮೈಸೂರು ಮಹಾರಾಜರ ಉಡುಗೊರೆ ಹಾಗೂ ಇದರ ಸಹಾಯದಿಂದ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಮಾಡಿರುವ ಭಾರತದ ಏಕೀಕರಣ ಅತ್ಯಂತ ಪ್ರಶಂಸನೀಯ ಮತ್ತು ಶಾಶ್ವತವಾದಂತ ಐತಿಹಾಸಿಕ ಘಟನೆಯಾಗಿರುತ್ತದೆ ಎಂದು ಮಾನ್ಯರು ಉಲ್ಲೇಖಿಸಿರುವುದನ್ನು ಭಾರತ ಪರ್ವ ಆಚರಣೆಯ ಸಭೆಯಲ್ಲಿ ಗಣ್ಯರು ಹರ್ಷೋದ್ಗಾರ ಮೂಲಕ ಮೆಚ್ಚುಗೆಯನ್ನು ವ್ಯಕ್ತಪಡಿಸಿರುತ್ತಾರೆ.